# ರಾಜವಿದ್ಯಾ ರಾಜಗುಹ್ಯ ಯೋಗ

*ಸ್ವಾಮಿ ಅಮೃತಾನಂದ*

ಭಗವದ್ಗೀತೆಯಲ್ಲಿ ಒಂಬತ್ತನೆಯ ಅಧ್ಯಾಯ ಅತಿ ಮುಖ್ಯವಾದುದು. ಅದರ ಒಟ್ಟುಸಾರವನ್ನು ಈ ಪುಟ್ಟ ಲೇಖನದಲ್ಲಿ ಭಟ್ಟಿ ಇಳಿಸಿದ್ದಾರೆ ಸ್ವಾಮಿ ಅಮೃತಾನಂದಜೀಯವರು. ಸ್ವಾಮೀಜಿಯವರು ವಿಶಾಖಪಟ್ಟಣದಲ್ಲಿರುವ ರಾಮಕೃಷ್ಣ ಮಿಷನ್ ಆಶ್ರಮದ ಅಧ್ಯಕ್ಷರಾಗಿದ್ದಾರೆ.

---

**ಈ** ಮೇಲಿನ ಯೋಗ ಬರುವುದು ಭಗವದ್ಗೀತೆಯ ಒಂಬತ್ತನೆಯ ಅಧ್ಯಾಯದಲ್ಲಿ, ಅಂದರೆ ಗೀತೆಯ ಮಧ್ಯಭಾಗದಲ್ಲಿ. ಒಂದು ಅರ್ಥದಲ್ಲಿ ಗೀತೆಯ ಕೇಂದ್ರ ಭಾವನೆ ಈ ಅಧ್ಯಾಯದಲ್ಲಿದೆ ಎಂದು ಹೇಳಬಹುದು. ಇದಕ್ಕೆ ಮುಂಚಿನ ಅಧ್ಯಾಯಗಳಲ್ಲಿ ಜ್ಞಾನ, ಕರ್ಮ ಮತ್ತು ಭಕ್ತಿಯೋಗಗಳ ವಿಷಯವನ್ನು ವಿಶದವಾಗಿ ತಿಳಿಸಲಾಗಿದೆ. ಏಳು ಮತ್ತು ಎಂಟನೆಯ ಅಧ್ಯಾಯಗಳಲ್ಲಿ ಭಕ್ತಿಯ ಬಗ್ಗೆ ಸಾಕಷ್ಟು ತಿಳಿಸಿ ಈ ಒಂಬತ್ತನೆಯ ಅಧ್ಯಾಯದಲ್ಲಿ ಭಕ್ತಿಯ ಐಶ್ವರ್ಯ, ಮಹಿಮೆಗಳೊಂದಿಗೆ ಅದರ ಉತ್ಕೃಷ್ಟತೆಯನ್ನು ವರ್ಣಿಸಲಾಗಿದೆ. ಭಗವದ್ಗೀತೆ ನಿಜವಾಗಿ ಭಕ್ತಿಕೇಂದ್ರಿತವಾದುದು.

ಮಧುಸೂದನ ಸರಸ್ವತಿಯವರು ಗೀತೆಯನ್ನು ಆರಾರು ಅಧ್ಯಾಯಗಳ ಮೂರು ಗುಂಪುಗಳಾಗಿ ವಿಂಗಡಿಸಿದ್ದಾರೆ. ಇದುವರೆಗೆ ಕರ್ಮ ಷಟ್ಕ (ಕರ್ಮಕ್ಕೆ ಸಂಬಂಧಿಸಿದ ೬ ಅಧ್ಯಾಯಗಳು) ಆಗಿ, ಭಕ್ತಿಗೆ ಸಂಬಂಧಿಸಿದ ಆರು ಅಧ್ಯಾಯಗಳಲ್ಲಿ ೨ ಅಧ್ಯಾಯಗಳನ್ನು ಹೇಳಿ ಈ ಒಂಬತ್ತನೆಯ ಅಧ್ಯಾಯದಲ್ಲಿ ಭಕ್ತಿಯ ತತ್ತ್ವವನ್ನು ಮುಂದುವರಿಸಲಾಗಿದೆ. ಈ ಭಕ್ತಿಯ ವಿಚಾರವಾಗಿ ಇನ್ನೂ ಮೂರು ಅಧ್ಯಾಯಗಳಲ್ಲಿ ಬೇರೆ ಬೇರೆ ದೃಷ್ಟಿಯಿಂದ ಹೇಳಿ ಭಕ್ತಿಯೋಗವನ್ನು ಪ್ರತಿಪಾದಿಸಲಾಗಿದೆ. ಹದಿಮೂರನೆಯ ಅಧ್ಯಾಯದಿಂದ ಆರು ಅಧ್ಯಾಯಗಳಲ್ಲಿ ಜ್ಞಾನದ ವಿಚಾರವು ವಿವರಿಸಲ್ಪಡುತ್ತದೆ. ಸಾಧಾರಣ ಓದುಗನಿಗೆ ಬರುವ ಪ್ರಶ್ನೆ ಏನೆಂದರೆ : ಈ ಅಧ್ಯಾಯಕ್ಕೆ ಏನಾದರೂ ವೈಶಿಷ್ಟ್ಯವುಂಟೆ? ಇಲ್ಲದಿದ್ದರೆ ಬರೀ ಆರ್ಭಟದಿಂದ ಇದನ್ನು ರಾಜವಿದ್ಯಾ ರಾಜಗುಹ್ಯವೆಂದು ಕರೆದಿದ್ದಾರೆಯೇ? ಇದ್ದರೆ ಆ ವೈಶಿಷ್ಟ್ಯವೇನು?

> ರಾಜವಿದ್ಯಾ ವಿದ್ಯಾನಾಂ ರಾಜಾ
> ದೀಪ್ತಿ ಅತಿಶಯತ್ವಾತ್
>
> ಈ ಬ್ರಹ್ಮವಿದ್ಯೆಯು ಎಲ್ಲ ವಿದ್ಯೆಗಳಿಗಿಂತಲೂ ಅತ್ಯಂತ ಪ್ರಕಾಶಮಾನವಾದುದರಿಂದ ರಾಜವಿದ್ಯೆ.
>
> —*ಶಂಕರಭಾಷ್ಯ*

ಶ್ರೀಧರಸ್ವಾಮಿಗಳು ಅಧ್ಯಾಯದ ಪ್ರಾರಂಭದಲ್ಲಿಯೇ ಸಂಗತಿಯನ್ನು (ಹಿಂದಿನ ಅಧ್ಯಾಯ ಅಥವಾ ಶ್ಲೋಕಕ್ಕೂ ಮುಂದಿನದಕ್ಕೂ ಇರುವ ಸಂಬಂಧವನ್ನು ಸೂಚಿಸುವುದು) ಹೇಳುವಾಗ ಈ ಅಧ್ಯಾಯವು ಪರಮೇಶ್ವರನ ಆಶ್ಚರ್ಯಮಯವಾದ ಐಶ್ವರ್ಯವನ್ನು ಕುರಿತು ಹೇಳುತ್ತದೆ ಎಂದಿದ್ದಾರೆ. ಮೊದಲನೆಯ ಶ್ಲೋಕದಲ್ಲಿಯೇ ಜ್ಞಾನಂ ವಿಜ್ಞಾನಸಹಿತಂ ಎಂದಿದೆ. ಅಂದರೆ ಜ್ಞಾನವನ್ನೂ ಅದನ್ನು ಜೀವನದಲ್ಲಿ ಆಚರಣೆಯಲ್ಲಿ ತರುವುದು ಹೇಗೆಂಬುದನ್ನೂ ಹೇಳಲಾಗಿದೆ ಎಂದಾಯಿತು. ಇದನ್ನು ತಿಳಿದವನು ಮುಕ್ತಿಯನ್ನು ಪಡೆಯುತ್ತಾನೆ. ಇದು ಬಹಳ ರಹಸ್ಯವಾದದ್ದು. ಅರ್ಜುನ! ನೀನು ಅಸೂಯಾರಹಿತ, ಆದ್ದರಿಂದ ಇದನ್ನು ತಿಳಿಸುತ್ತೇನೆ ಎಂದು ಕೃಷ್ಣ ಪರಮಾತ್ಮನು ಹೇಳುವಾಗ ಸಾಧಕನಿಗೆ ಬೇಕಾದದ್ದೆಲ್ಲವನ್ನೂ ಹೇಳಿದಂತಾಯಿತು. ಒಬ್ಬನು ಅಸೂಯಾರಹಿತನಾಗಿದ್ದರೆ ಅವನಿಗೆ ಪ್ರಾಪಂಚಿಕ ವಿಷಯದಲ್ಲಿ ಆಸಕ್ತಿಯಿರುವುದಿಲ್ಲ ಮತ್ತು ಎಲ್ಲರನ್ನೂ ಸಮಾನವಾಗಿ ಪ್ರೀತಿಸುತ್ತಾನೆ. ಇವೆರಡೂ ಸಾಧಕನಿಗಿರಬೇಕಾದ ಅತಿ ಮುಖ್ಯವಾದ ಗುಣಗಳು. ಇಲ್ಲಿ ಗುಹ್ಯತಮ ಎಂಬುವ ಶಬ್ದಕ್ಕೆ ಶ್ರೀಧರಸ್ವಾಮಿಗಳು ಬಹಳ ಸ್ವಾರಸ್ಯವಾಗಿ ಅರ್ಥಮಾಡಿದ್ದಾರೆ.

**ಗುಹ್ಯ** ಎಂಬುವುದು ಧರ್ಮಜ್ಞಾನ—ಧರ್ಮವನ್ನು ಕುರಿತಾದ ಜ್ಞಾನ. ಯಾವುದು ಧರ್ಮ, ಯಾವುದು ಅಧರ್ಮ ಎಂದು ಸರಿಯಾಗಿ ತಿಳಿದುಕೊಂಡಿರುವವರು ವಿರಳ. ಆದ್ದರಿಂದ ಧರ್ಮಜ್ಞಾನ ಗುಹ್ಯ ಅರ್ಥಾತ್ ರಹಸ್ಯ. ಆತ್ಮಜ್ಞಾನ ಎಂದರೆ ಆತ್ಮ ದೇಹಾದಿವ್ಯತಿರಿಕ್ತನಾದವನು ಎಂದು ತಿಳಿದುಕೊಳ್ಳುವುದು—ಇದು ಗುಹ್ಯತರ. ಸರ್ವವ್ಯಾಪಿಯಾದ, ಸರ್ವಾತೀತವಾದ ಪರಮಾತ್ಮನ ಜ್ಞಾನವು ಗುಹ್ಯತಮವಾದುದು. ಈ ಅಧ್ಯಾಯ ಹೇಳಹೊರಟಿರುವುದು ಪರಮಾತ್ಮನ ಜ್ಞಾನವನ್ನು. ಆದ್ದರಿಂದ ರಾಜವಿದ್ಯಾ ಅಂದರೆ ಉತ್ತಮವಾದ ಜ್ಞಾನ, ರಾಜಗುಹ್ಯ ಅಂದರೆ ರಹಸ್ಯತಮವಾದದ್ದು ಎಂದು ಹೇಳಿ ಅಧ್ಯಾಯದ ಹೆಸರು ರಾಜವಿದ್ಯಾ ರಾಜಗುಹ್ಯ ಎಂಬುವುದು ಸಾರ್ಥಕ ಎಂದು ಸೂಚಿಸಿದಂತಾಯ್ತು. ಅಷ್ಟೇ ಅಲ್ಲದೆ, ಇದು ಪ್ರತ್ಯಕ್ಷ ಫಲವನ್ನು ಕೊಡುವುದು ಮತ್ತು ಬಹಳ ಸುಲಭವಾಗಿ ಇದನ್ನು ಸಾಧಿಸಬಹುದು. ಈ ಫಲ ಶಾಶ್ವತವಾದದ್ದು. ಈ ಮಾತಿನಲ್ಲಿ ಶ್ರದ್ಧೆಯಿಲ್ಲದವರು ಇದನ್ನು ಅನುಸರಿಸದೆ ಸಂಸಾರದಲ್ಲಿ ಮುಳುಗಿರುತ್ತಾರೆ.

ಮೊದಲು ತಿಳಿದುಕೊಳ್ಳಬೇಕಾದದ್ದು ಏನೆಂದರೆ— ಭಗವಂತ ಈ ಜಗತ್ತೆಲ್ಲವನ್ನೂ ವ್ಯಾಪಿಸಿದ್ದಾನೆ. ಎಲ್ಲವೂ ಅವನಲ್ಲಿವೆ. ಆದರೆ ಅವನು ಅವುಗಳಲ್ಲಿಲ್ಲ. ಹೀಗೆ ಹೇಳಿ ಇದರ ಮುಂದಿನ ಶ್ಲೋಕದಲ್ಲಿಯೇ ನ ಚ ಮತ್ಸ್ಥಾನಿ ಭೂತಾನಿ—'ಇವುಗಳಾವುವೂ ನನ್ನಲ್ಲಿಲ್ಲ' ಎಂದು ಶ್ರೀಕೃಷ್ಣನು ಹೇಳುತ್ತಾನೆ. ಅಂದರೆ

ಇವುಗಳಾವುವೂ ಭಗವಂತನಲ್ಲಿ ಇಲ್ಲ ಎಂದಂತಾಯಿತು. ಅರ್ಜುನ ತಬ್ಬಿಬ್ಬಾಗುವನೆಂದು ಭಾವಿಸಿ ಪಶ್ಯ ಮೇ ಯೋಗಮೈಶ್ವರಂ 'ಇದೋ ನೋಡು, ಇದು ನನ್ನ ಯೋಗ ವೈಭವ' ಎಂದು ಹೇಳಿದ ಶ್ರೀಕೃಷ್ಣ.

ಜೀವನು ಶರೀರವನ್ನು ಆಶ್ರಯಿಸಿರುವುದು ಅಹಂ ಬುದ್ಧಿಯಿಂದ ಅಂದರೆ ಶರೀರದೊಂದಿಗಿರುವ ತಾದಾತ್ಮ್ಯ ಬುದ್ಧಿಯಿಂದ. ಆದರೆ ಭಗವಂತ ಎಲ್ಲಾ ಜೀವರಾಶಿಗಳನ್ನೂ ತನ್ನಲ್ಲಿಟ್ಟುಕೊಂಡು ಕಾಪಾಡುತ್ತಿರುವುದು ಅಹಂಬುದ್ಧಿಯಿಂದಲ್ಲ, ಮಾಯಾಶಕ್ತಿಯಿಂದ. ಭಗವಂತನಿಗೆ ಅಹಂಕಾರವಿಲ್ಲ ಅಂದರೆ ಯಾವ ವಸ್ತುವಿನೊಂದಿಗೂ ತಾದಾತ್ಮ್ಯವಿಲ್ಲ. ಕೊನೆಯ ಮಾತು ಏನೆಂದರೆ ಇರುವುದು ಭಗವಂತನೊಬ್ಬನೇ. ಎರಡನೆಯ ವಸ್ತುವಿದ್ದರೆ ತಾನೇ ಅಹಂಕಾರವಿರುವುದು! ಆದರೆ ಇದ್ದಂತೆ ಕಾಣುತ್ತದೆ. ಅದೇ ಮಾಯೆ, ಅದೇ ವ್ಯವಹಾರ, ಅದೇ ಮಿಥ್ಯಾಜ್ಞಾನ. 'ನನ್ನಲ್ಲಿ ಇವೆ' 'ನನ್ನಲ್ಲಿ ಇಲ್ಲ' ಎರಡೂ ಪರಸ್ಪರ ವಿರುದ್ಧವಾದ ಮಾತುಗಳು. ಆದರೆ ಎರಡೂ ನಿಜ. ಪಾರಮಾರ್ಥಿಕವಾಗಿ ಭಗವಂತನಲ್ಲಿಲ್ಲ, ವ್ಯಾವಹಾರಿಕವಾಗಿ ಇವೆ ಎಂದು ಹೇಳಿದಂತಾಯಿತು. ಒಂದು ದೃಷ್ಟಿಯಲ್ಲಿ ಹಗ್ಗದಲ್ಲಿ ಸರ್ಪವಿದೆ, ಇನ್ನೊಂದು ದೃಷ್ಟಿಯಲ್ಲಿ ಹಗ್ಗದಲ್ಲಿ ಸರ್ಪವಿಲ್ಲ—ಅದು ಸರ್ಪದಂತೆ ಕಾಣುತ್ತಿದೆ ಅಷ್ಟೇ. ಹೀಗೆಯೇ ಅವನಲ್ಲಿ ಈ ಜಗತ್ತು ಕಾಣುತ್ತಿದೆ, ಆದರೆ ನಿಜವಾಗಿ ಅವನಲ್ಲಿಲ್ಲ. ಇದೇ ಭಗವಂತನ ಮಾಯಾಶಕ್ತಿ—ಅಘಟಿತಘಟನಾ ಪಟೀಯಸೀ.

ಭಗವಂತ ಅಧ್ಯಕ್ಷ—ಅವನ ಅಸ್ತಿತ್ವವೊಂದೇ ಸಾಕು, ಅವನೇನೂ ಮಾಡಬೇಕಾಗಿಲ್ಲ. ಅವನಿಗೆ ಅಧೀನವಾದ ಪ್ರಕೃತಿ ಜಗತ್ತೆಲ್ಲವನ್ನೂ ಸೃಷ್ಟಿ ಮಾಡುತ್ತಾಳೆ. ಈ ಕ್ರಿಯೆ ಭಗವಂತನ ಪಾರಮಾರ್ಥಿಕ ಸ್ವರೂಪಕ್ಕೆ ಸೇರಿದ್ದಲ್ಲ. ಹೀಗೆ ಸರಿಯಾಗಿ ತಿಳಿದುಕೊಂಡು ಭಗವಂತನನ್ನು ಅನನ್ಯ ಬುದ್ಧಿಯಿಂದ ಭಜಿಸುವವನು ಮಹಾತ್ಮ. ಅಜ್ಞಾನಿಗಳು ಮನುಷ್ಯರೂಪದಲ್ಲಿರುವ ಶ್ರೀಕೃಷ್ಣನ ಪರಂಭಾವವನ್ನು ಅರಿಯರು. ಅಂದರೆ ವ್ಯಕ್ತಿತ್ವದ ಹಿಂದಿರುವ ಪರಮ ಸತ್ಯವನ್ನು ಅರಿಯದೆ ವ್ಯರ್ಥ ಆಸೆಗಳು ಮತ್ತು ವ್ಯರ್ಥ ಕರ್ಮಗಳಲ್ಲಿ ಸಿಲುಕಿಕೊಂಡು ಮುಕ್ತಿಯಿಂದ ದೂರವಾಗುತ್ತಾರೆ. ಮಹಾತ್ಮನು ಭಗವತ್ತತ್ತ್ವವನ್ನು ಅರಿತು ಮುಕ್ತಿಯನ್ನು ಪಡೆಯುತ್ತಾನೆ.

ವಾಸುದೇವನೇ ಎಲ್ಲವೆಂದು ತಿಳಿಯುವುದು ಜ್ಞಾನ. ಇದೇ ಜ್ಞಾನಯಜ್ಞ. ಭಗವಂತನು ಒಬ್ಬನೇ ಎನ್ನುವುದು ಪರಬ್ರಹ್ಮ ತತ್ತ್ವ. ಈ ರೀತಿ ಪೂಜಿಸುವವನು, ನಾನು ದಾಸ ಎಂದು ಭೇದ ಬುದ್ಧಿಯಿಂದ ಪೂಜಿಸುವವನು, ಎಲ್ಲಾ ದೇವತಾ ಮೂರ್ತಿಗಳೂ ಆ ಭಗವಂತನ ರೂಪಗಳೇ ಎಂದು ಪೂಜಿಸುವವನು ಇವರೆಲ್ಲರೂ ಹಲವಾರು ಕ್ರಮಗಳಿಂದ (ಭಗವಂತನನ್ನೇ) ಪೂಜಿಸುತ್ತಾರೆ. ನನ್ನನ್ನು ಅನನ್ಯ (ಅಂದರೆ ಬೇರೆ ನನಗೆ ದಿಕ್ಕಿಲ್ಲ) ಎಂದು ಭಾವಿಸಿ ಭಜಿಸುವವನ ಯೋಗಕ್ಷೇಮದ ಹೊರೆ ನನ್ನ ಮೇಲೆ.

ಬೇರೆ ಬೇರೆ ದೇವತೆಗಳನ್ನು ಪೂಜಿಸಿದರೂ ನನ್ನನ್ನು ಪೂಜಿಸಿದಂತೆಯೇ. ಆದರೆ ಪರಮಾರ್ಥತತ್ತ್ವ ಅವರಿಗೆ ಗೋಚರಿಸುವುದಿಲ್ಲ. ಏಕೆಂದರೆ ಬೇರೆ ಬೇರೆ ದೇವತೆಗಳ ಹಿಂದಿರುವ ಏಕತತ್ತ್ವವನ್ನು ಅವರು ಪರಿಗಣಿಸುವುದಿಲ್ಲ, ಕೇವಲ ಆಯಾಯ ದೇವತೆಗಳ ರೂಪಕ್ಕೆ ಬದ್ಧರಾಗಿರುತ್ತಾರೆ. ಬೇರೆ ದೇವತೆಗಳನ್ನು ಪೂಜಿಸುವುದು ಶ್ರಮ ಸಾಧ್ಯ, ವಿತ್ತ ಸಾಧ್ಯ. ಆದರೆ ನನ್ನನ್ನು ಪೂಜಿಸಬೇಕಾದರೆ ಭಕ್ತಿಯೊಂದೇ ಸಾಕು. ಮನುಷ್ಯ ತನ್ನ ಸ್ವಭಾವದಿಂದ ಕೆಲವು ಕರ್ಮಗಳನ್ನು ಮಾಡುತ್ತಾನೆ ಮತ್ತು ಶಾಸ್ತ್ರದ ಉಪದೇಶಕ್ಕನುಸಾರವಾಗಿ ಕೆಲವು ಕರ್ಮಗಳನ್ನು ಮಾಡುತ್ತಾನೆ. ಇವೆಲ್ಲವನ್ನೂ ನನಗೆ ಅರ್ಪಿಸಿದರೆ ಅವನು ಬದ್ಧನಾಗುವುದಿಲ್ಲ.

ನನಗೆ ಬೇಕಾದವರಾಗಲೀ ಬೇಡವಾದವರಾಗಲೀ ಯಾರೂ ಇಲ್ಲ. ನನ್ನನ್ನು ಭಕ್ತಿಯಿಂದ ಪೂಜಿಸುವವರಲ್ಲಿ ನಾನು ಇರುತ್ತೇನೆ, ನನ್ನಲ್ಲಿ ಅವರು ಇರುತ್ತಾರೆ. ಇದು ಈ ಅಧ್ಯಾಯದ ತಿರುಳು. ಇಂತಹ ಭಕ್ತನು ಯಾರೇ ಆಗಿರಲಿ, ಆಚಾರವಿಲ್ಲದವನಾಗಲೀ ಒಳ್ಳೆಯ ಅಥವಾ ಕೆಟ್ಟ ವಂಶದಲ್ಲಿ ಹುಟ್ಟಿದವನಾಗಲೀ, ಎಂತಹ ಪಾಪಿಯಾಗಲೀ ಅವನನ್ನು ಸಾಧು ಎಂದೇ ತಿಳಿಯಬೇಕು. ಅವನ ಭಕ್ತಿಯೇ ಅವನನ್ನು ಸನ್ಮಾರ್ಗಕ್ಕೆ ಒಯ್ಯುತ್ತದೆ. 'ಅರ್ಜುನ! ಈ ಮಾತನ್ನು ಘಂಟಾಘೋಷವಾಗಿ ಎಲ್ಲರ ದೃಷ್ಟಿಯನ್ನೂ ಆಕರ್ಷಿಸಿ ಹೇಳು,' ಎಂದು ಅರ್ಜುನನಿಗೆ ಪ್ರೇರೇಪಿಸುತ್ತಾನೆ. 'ನನ್ನ ಭಕ್ತರಿಗೆ ಎಂದಿಗೂ ನಾಶವಿಲ್ಲ'ವೆಂದು ಘೋಷಿಸು ಎನ್ನುತ್ತಾನೆ. ಇದು ಈ ಅಧ್ಯಾಯದ ವೈಶಿಷ್ಟ್ಯ.

ಕೊನೆಯ ಮಾತು—'ಅರ್ಜುನ! ಈ ದೇಹ ಅನಿತ್ಯ ಮತ್ತು ಸುಖವಿಲ್ಲದ್ದು. ಇದನ್ನು ಪಡೆದ ನೀನು ಸುಖವನ್ನರಸುವುದನ್ನು ಬಿಟ್ಟು ನನ್ನ ಮೇಲೆ ಮನಸ್ಸಿಡು, ನನ್ನ ಭಕ್ತನಾಗು, ನನ್ನ ಉದ್ದೇಶ್ಯವಾಗಿ ಯಜ್ಞಗಳನ್ನು ಮಾಡು. ನನ್ನನ್ನು ನಮಸ್ಕರಿಸು. ನೀನು ನನ್ನನ್ನೇ ಪಡೆಯುತ್ತೀಯೆ. ನನ್ನನ್ನೇ ಚರಮಲಕ್ಷ್ಯವಾಗಿ ನಂಬು. ನನ್ನಲ್ಲಿ ಐಕ್ಯವಾಗುತ್ತೀಯೆ.' ಇದು ಅಧ್ಯಾಯದ ಭರತವಾಕ್ಯ—ಭಕ್ತಿಯ ಅದ್ಭುತ ವೈಭವ.

ಈ ಮಾತನ್ನೇ ಭಾಗವತದಲ್ಲಿ ಮೇಲಿಂದ ಮೇಲೆ ಹೇಳಿದೆ. ಇದು ಸಾತ್ವತ ಧರ್ಮ, ಇದು ಭಾಗವತ ಧರ್ಮ. ಇದೇ ಶ್ರೀರಾಮಕೃಷ್ಣರ ಜ್ಞಾನಮಿಶ್ರ ಭಕ್ತಿ—ಜ್ಞಾನದ ಉರಿಯಲ್ಲಿ ಹುರಿದು ಭಕ್ತಿಯ ಪಾಕದಲ್ಲಿ ನೆನೆಸಿದ ಜಿಲೇಬಿ. ಇದೇ ಜ್ಞಾನಭಕ್ತಿಗಳ ಸಮನ್ವಯ. ಇದೇ ಈ ಪ್ರಪಂಚದಲ್ಲಿ ನಿರ್ಲಿಪ್ತರಾಗಿರಬೇಕಾದರೆ ನಮಗೆ ಇರಬೇಕಾದ ಜ್ಞಾನ.

**ಪುರುಷಾರ್ಥಸಾಧನಂ ದುರ್ಲಭಂ ಮನುಷ್ಯತ್ವಂ**

**ಲಬ್ಧ್ವಾ ಭಜಸ್ವ ಸೇವಸ್ವ ಮಾಮ್—**

ಪುರುಷಾರ್ಥಸಾಧನೆಗೆ ಯೋಗ್ಯವಾದ ದುರ್ಲಭವಾದ ಮನುಷ್ಯತ್ವವನ್ನು

ಪಡೆದ ನೀನು ನನ್ನ(ಭಗವಂತನ) ಸೇವೆಯನ್ನು ಮಾಡು. —ಶಂಕರಭಾಷ್ಯ